ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಪ್ರವಾಸೋದ್ಯಮ ಇಲಾಖೆಯು ಈ ಕೆಳಕಂಡ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಸೌಲಭ್ಯ	ವೆಚ್ಚ.
1) ಪ್ರವಾಸಿ ಗೃಹಗಳು, ಮೂಡಬಿದರೆ.	19.15 ಲಕ್ಷ ರೂ.
2) ಪ್ರವಾಸಿ ಗೃಹಗಳು, ಕಾರ್ಕಳ	
3) ಬೇಂದ್ರೆ ತೀರ್ಥದಲ್ಲಿ ಪ್ರವಾಸಿ ಸೌಲಭ್ಯ	1.99 ಲಕ್ಷ ರೂ.
4) ಮೂಡಬಿದರೆಯ ಸಾವಿರಕಂಬದ ಬಸದಿಗೆ ಹೊನಲು ಬೆಳಕು ವ್ಯವಸ್ಥೆ.	2.00 ಲಕ್ಷ ರೂ.
5) ಕಾರ್ಕಳದ ಗೊಮ್ಮಟನ ವಿಗ್ರಹಕ್ಕೆ ಹೊನಲು ಬೆಳಕು ವ್ಯವಸ್ಥೆ	0.76 ಲಕ್ಷ ರೂ.

ಆ) ಪ್ರಸ್ತುತ ವರ್ಷದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

1) ಶಿರಾಡಿಯಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣ ವೆಚ್ಚ -9.99 ಲಕ್ಷ ರೂ.ಗಳು.
2) ಮರವಂತೆಯಲ್ಲಿ ಕಡಲು ತೀರ ತಂಗುದಾಣದ ನಿರ್ಮಾಣ.-ವೆಚ್ಚ 45 ಲಕ್ಷ ರೂ.ಗಳು.

ಈ ಮೇಲ್ಕಂಡ ಎರಡು ಯೋಜನೆಗಳು ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು.

ಇ) ಪ್ರವಾಸೋದ್ಯಮ ಇಲಾಖಾವತಿಯಿಂದ ಯಾವ ಕಾರ್ಯಕ್ರಮವು ಅಪೂರ್ಣಗೊಂಡಿರುವುದಿಲ್ಲ.

ಪತ್ರಿಕೆಗಳಿಗೆ ಸರ್ಕಾರಿ ಜಾಹಿರಾತಿಗೋಸ್ಕರ ಆದ ವೆಚ್ಚ.

3376-ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ 1990-91ರಲ್ಲಿ ದಿನಪತ್ರಿಕೆ ವಾರ ಪತ್ರಿಕೆಗಳಿಗೆ ಕನ್ನಡ ಮತ್ತು ಆಂಗ್ಲ ಭಾಷೆಗಳ ಪತ್ರಿಕೆಗಳಿಗೆ ಸರ್ಕಾರದ ವತಿಯಿಂದ ಕೊಟ್ಟ ಜಾಹೀರಾತಿನ ಒಟ್ಟು ವೆಚ್ಚವೆಷ್ಟು? ಪ್ರತಿಯೊಂದು ಪತ್ರಿಕೆಗಳಿಗೆ ಕೊಟ್ಟ ಹಣದ ವಿವರಗಳನ್ನು ಒದಗಿಸುವುದು.

ಆ) ಜಿಲ್ಲಾಮಟ್ಟದಲ್ಲಿರುವ ದಿನಪತ್ರಿಕೆಗಳಿಗೆ ಸರ್ಕಾರದ ಜಾಹೀರಾತಿನಿಂದ ಖರ್ಚಾಗಿರುವ ಒಟ್ಟು ಹಣವೆಷ್ಟು?

ಇ) ಜಿಲ್ಲಾಮಟ್ಟದ ಪತ್ರಿಕೆಗಳಿಗೆ ಸರ್ಕಾರದವರು ಕೊಡುತ್ತಿರುವ ಸೌಲಭ್ಯಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು)

ಆ) 1990-91ರಲ್ಲಿ ದಿನಪತ್ರಿಕೆಗಳಿಗೆ ರೂ. 94,44,689-30 1990-91ರಲ್ಲಿ ವಾರಪತ್ರಿಕೆಗಳಿಗೆ ರೂ.2,51,752-00ಅನುಬಂಧ1ಮತ್ತು 2ರಲ್ಲಿರುವ ಪ್ರಕಾರ ಪತ್ರಿಕಾವಾರು ವಿವರಗಳನ್ನು ಸದನದ ಮೇಜಿನ ಮೇಲಿಡಲಾಗಿದೆ.

ಇ) ಒಟ್ಟು ರೂ. 54,46,623-00

ಇ) ಮಾನ್ಯತೆ ಪಡೆದ ಜಿಲ್ಲಾಮಟ್ಟದ ಪತ್ರಿಕೆಗಳ ಪತ್ರಕರ್ತರಿಗೆ, ನಗರ ಸಾರಿಗೆ ಇರುವಡೆ ಬಸ್‌ಪಾಸ್, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ರಿಯಾಯತಿ ದರದಲ್ಲಿ ಪ್ರಯಾಣಿಕರು ಬಸ್ ಕೂಪನ್ ನೀಡಲಾಗುತ್ತಿದೆ.

2) ಕಾರ್ಯನಿರತ ಪತ್ರಕರ್ತರಾಗಿದ್ದು ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನಿಯಮಗಳ ಅನುಸಾರ ಪ್ರತಿ ತಿಂಗಳು 250-00 ರೂ.ಗಳ ಮಾಶಾಸನ ನೀಡಲಾಗುತ್ತಿದೆ. ಇವರು ಮೃತರಾದಲ್ಲಿ ಇವರ ಕುಟುಂಬದವರಿಗೆ ಪ್ರತಿ ತಿಂಗಳು 100 ರೂ.ಗಳ ಕುಟುಂಬ ಮಾಶಾಸನ ನೀಡಲಾಗುತ್ತಿದೆ.

3) ಜಿಲ್ಲಾಮಟ್ಟದ ಪತ್ರಿಕೆಗಳ ಸಂಪಾದಕರುಗಳಿಗೆ ಜಿಲ್ಲಾಮಟ್ಟದ ಪ್ರವಾಸವನ್ನು ಅಲ್ಲದೆ ಅಂತರ ಜಿಲ್ಲಾ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ.

4) ಸಭೆ ಸಮಾರಂಭಗಳಿಗೆ ಪತ್ರಕರ್ತರನ್ನು ಕರೆದೊಯ್ಯಲಾಗುತ್ತಿದೆ. ಪ್ರತಿ ನಿತ್ಯ ಪತ್ರಿಕಾ ಪ್ರಕಟಣೆಗಳನ್ನು ನೀಡಲಾಗುತ್ತಿದೆ.

5) ಪತ್ರಿಕಾ ಅಕಾಡೆಮಿವತಿಯಿಂದ ತರಬೇತಿ ಏರ್ಪಡಿಸಲಾಗುತ್ತಿದೆ ಹಾಗೂ ಪ್ರಶಸ್ತಿಗಳನ್ನು ಸಹ ನೀಡಲಾಗುತ್ತಿದೆ.

ಸೇಡಂ ತಾಲ್ಲೂಕಿನ ನರೆಟ್ಲಾ ಪಾಡ ಹೊಸಕೆರೆ ಕುರಿತು.

3097-ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೊಲುಮಾಮಿಡಿ ಸಮೀಪ ನರೆಟ್ಲಾಪಾಡ ಹೊಸ ಕೆರೆ ನಿರ್ಮಾಣ ಮಾಡಿದರೆ ಕನಿಷ್ಟ 1500 ಎಕರೆ (ಹದಿನೈದನೂರು ಎಕರೆ) ನೀರಾವರಿಯಾಗಿ ರೈತರಿಗೆ ಲಾಭದಾಯವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 1990-91 ಮತ್ತು 1991-92ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗಳು ಸೇರಿದ್ದರೂ ಕೂಡ ಇಮವರೆವಿಗೂ ಕಾರ್ಯವು ಪ್ರಾರಂಭವಾಗದಿರಲು ಕಾರಣವೇನು?

ಇ) ಕಡಿಮೆ ವೆಚ್ಚದಿಂದ ಹೆಚ್ಚಿನ ನೀರಾವರಿಯಾಗುವ ಈ ಹೊಸ ಕೆರೆಯನ್ನು ಮಾಡಿ ರೈತರಿಗೆ (ಈ ಭಾಗದ ಜನರಿಗೆ) ಅನುಕೂಲ ಮಾಡಿಕೊಡುವುದು ಎಂದಿನಿಂದ:

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು)

ಅ) ಇಲ್ಲ.

ಆ) 1990-91 ಮತ್ತು 1991-92ನೇ ಸಾಲಿನ ಆಯವ್ಯಯದಲ್ಲಿ ಪಟ್ಟಿಯಲ್ಲಿ ಸೇರಿಲ್ಲ.

ಇ) ಈ ಬಗ್ಗೆ ಕಾರ್ಯಕ್ರಮವಿಲ್ಲ.

ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಸಾಮಾನ್ಯ ಸಭೆಯ ನಿರ್ಣಯವನ್ನು ಲೆಕ್ಕಿಸದ ಹಣ ಬಿಡುಗಡೆ.

2996-ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: